

# ಮಲಪ್ರಭಾ ಜಾಧವ್

ಕರ್ನಾಟಕದಲ್ಲಿ ಅಷ್ಟೇನೂ ಪರಿಚಿತವಲ್ಲದ ಕುರಾಶ್ ಕ್ರೀಡೆಯಲ್ಲಿ ಬೆಳಗಾವಿಯ ಮಲಪ್ರಭಾ ಜಾಧವ್ 2018ರ 'ಏಷ್ಯನ್ ಕ್ರೀಡಾಕೂಟ'ದಲ್ಲಿ ಕಂಚಿನ ಪದಕ ಗೆದ್ದಾಗ ಬಹುತೇಕರು 'ಇಂಥದ್ದೊಂದು ಕ್ರೀಡೆ ಇದೆಯೇ' ಎಂದು ಪ್ರಶ್ನಿಸಿದ್ದರು.

ಉಜ್‌ಬೇಕಿಸ್ತಾನದ ಸಾಂಪ್ರದಾಯಿಕ ಸಮರಕಲೆ ಕುರಾಶ್ ಭಾರತದಲ್ಲಿ ಸದ್ದು ಮಾಡಿದ್ದು ಇತ್ತೀಚಿನ ವರ್ಷಗಳಲ್ಲಿ. ಅಸ್ಸಾಂ, ಹರಿಯಾಣ, ದೆಹಲಿ, ಪಂಜಾಬ್, ಉತ್ತರ ಪ್ರದೇಶದಲ್ಲಿ ಈ ಕ್ರೀಡೆ ವೇಗವಾಗಿ ಬೆಳೆಯುತ್ತಿದೆ. ಕರ್ನಾಟಕದಲ್ಲಿ ಈಗಷ್ಟೇ ಹೆಜ್ಜೆಗುರುತು ಮೂಡಿಸುತ್ತಿದೆ. ಮಲಪ್ರಭಾ ಪದಕ ಗೆದ್ದು ಕುರಾಶ್ ಬಗ್ಗೆ ಕುತೂಹಲ ಬೆಳೆಯುವಂತೆ ಮಾಡಿದ್ದಾರೆ.

ಬೆಳಗಾವಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಸತಿ ನಿಲಯದಲ್ಲಿರುವ ಮಲಪ್ರಭಾ ಮೊದಲಿನಿಂದ ಕೊಕ್ಕೊ ಬಗ್ಗೆ ಒಲವು ಹೊಂದಿದ್ದರು. ನಂತರ ಜೂಡೊ ಕ್ರೀಡೆಯತ್ತ ಅವರ ಆಸಕ್ತಿ ಬೆಳೆಯಿತು. ಜೂಡೊದ ನಿಯಮಗಳನ್ನೇ ಹೊಂದಿರುವ ಕುರಾಶ್ ಕ್ರೀಡೆಯನ್ನು 2009ರಿಂದ ಅಭ್ಯಾಸ ಮಾಡುತ್ತಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ಕುರಾಶ್ ಸ್ಪರ್ಧೆಯಲ್ಲಿ ಹತ್ತು ಬಾರಿ ಪಾಲ್ಗೊಂಡು, ಏಳು ಬಾರಿ ಪದಕಗಳನ್ನು ಜಯಿಸಿದ್ದಾರೆ. ರಾಷ್ಟ್ರೀಯ ಮಟ್ಟದ ಟೂರ್ನಿಯಲ್ಲಿ 13 ಪದಕಗಳನ್ನು ಗೆದ್ದಿದ್ದಾರೆ.

ಜೂಡೊದಲ್ಲಿ 2011ರಲ್ಲಿ ದಕ್ಷಿಣ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಕಾಮನ್‌ವೆಲ್ತ್ ಜೂನಿಯರ್ ಜೂಡೊ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಕುರಾಶ್‌ನಲ್ಲಿ 2017ರಲ್ಲಿ ತುರ್ಕಮೇನಿಸ್ತಾನದಲ್ಲಿ ನಡೆದ ಏಷ್ಯನ್ ಕುರಾಶ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಹೀಗೆ ಅನೇಕ ಪದಕಗಳನ್ನು ಜಯಿಸಿದ್ದಾರೆ. ರಾಷ್ಟ್ರೀಯ ಶಾಲಾ ಕ್ರೀಡಾಕೂಟದ ಕುರಾಶ್‌ನಲ್ಲಿ 2010ರಿಂದ ಸತತ ಐದು ವರ್ಷ ಚಿನ್ನದ ಒಡತಿಯಾಗಿದ್ದಾರೆ.

ಬೆಳಗಾವಿ ಜಿಲ್ಲೆಯ ತುರಮುರಿ ಗ್ರಾಮದಲ್ಲಿ ಮಲಪ್ರಭಾ ತಂದೆ ಯಲ್ಲಪ್ಪ ಹಾಗೂ ತಾಯಿ ಶೋಭಾ ಜಾಧವ್ ಕೃಷಿಯಲ್ಲಿ ತೊಡಗಿದ್ದಾರೆ. ಮಧ್ಯಮ ವರ್ಗದ ಕುಟುಂಬದ ಯಲ್ಲಪ್ಪ ಅವರಿಗೆ ಐದು ಜನ ಮಕ್ಕಳಲ್ಲಿ ನಾಲ್ವರು ಹೆಣ್ಣುಮಕ್ಕಳು. ಕೊನೆಯ ಮಗಳಾದ ಮಲಪ್ರಭಾ ಶಾಲಾ ಆರಂಭದ ಹಂತದಿಂದಲೇ ಹಾಸ್ಟೆಲ್ ಸೇರಿಕೊಂಡರು. ಈಗ ಬೆಳಗಾವಿಯಲ್ಲಿ ವನಿತಾ ವಿದ್ಯಾಲಯದಲ್ಲಿ ಪಿಯುಸಿ ಓದುತ್ತಿದ್ದಾರೆ. ಮಲಪ್ರಭಾಗೆ 2014–15ನೇ ಸಾಲಿನಲ್ಲಿ ಏಕಲವ್ಯ ಮತ್ತು 2016–17ರಲ್ಲಿ ಕರ್ನಾಟಕ ಒಲಿಂಪಿಕ್ ಪ್ರಶಸ್ತಿ ಲಭಿಸಿದೆ.

ಇನ್ನೆರೆಡು ತಿಂಗಳಲ್ಲಿ ಕೀನ್ಯಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಕುರಾಶ್ ಚಾಂಪಿಯನ್‌ಷಿಪ್‌ಗೆ ಸಿದ್ಧತೆ ನಡೆಸುತ್ತಿದ್ದಾರೆ. ನಿತ್ಯ ಬೆಳಿಗ್ಗೆ ಮತ್ತು ಸಂಜೆ ಕ್ರೀಡಾ ಇಲಾಖೆಯ ಕೋಚ್ ಎಂ.ಎನ್. ತ್ರಿವೇಣಿ ಸಿಂಗ್ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ.

ಕುರಾಶ್ ಸದ್ಯಕ್ಕೆ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಗೊಂಡಿಲ್ಲ. 2024ರ ವೇಳೆಗೆ ಈ ಕ್ರೀಡೆಗೆ ಒಲಿಂಪಿಕ್ಸ್‌ನಲ್ಲಿ ಸ್ಥಾನ ಲಭಿಸುತ್ತದೆ ಎನ್ನುವ ಆಸೆ ಇಟ್ಟುಕೊಂಡು ಮಲಪ್ರಭಾ ಈಗಿನಿಂದಲೇ ತರಬೇತಿ ಆರಂಭಿಸಿದ್ದಾರೆ.

# ಗೀತಾ ಗೋಪಿನಾಥ್



'ಮಗಳ ಸಾಧನೆಯೇ 2018ರ ಸಂವತ್ಸರ ನಮಗೆ ನೀಡಿದ ಬಹುದೊಡ್ಡ ಗಿಫ್ಟ್. ಒಬ್ಬ ತಂದೆಯಾಗಿ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಕಠಿಣ ಶ್ರಮದಿಂದ ಈ ಮಟ್ಟಕ್ಕೆ ಏರಿದ್ದಾಳೆ. ಈಗಲೂ ಕಠಿಣ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದಾಳೆ. ನನ್ನ ಪಾಲಿಗೆ ಆಕೆ ಮುದ್ದು ಕಂದ. ಸಾಧನೆಗೆ ಕೊನೆ ಇಲ್ಲ. ಮತ್ತಷ್ಟು ಎತ್ತರಕ್ಕೇರುತ್ತಾಳೆ.'

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ (ಐಎಂಎಫ್) ಸಲಹೆಗಾರರಾಗಿ ನೇಮಕಗೊಂಡಿರುವ ಮಗಳು ಗೀತಾ ಗೋಪಿನಾಥ್ ಬಗ್ಗೆ ಮಾತನಾಡುವಾಗ, ಅವರ ತಂದೆ ಟಿ.ವಿ. ಗೋಪಿನಾಥ್ ದನಿಯಲ್ಲಿ ಹೆಮ್ಮೆ ಇತ್ತು, ಮಾತುಗಳಿಗೆ ಮೀರಿದ ಖುಷಿ ಇತ್ತು.

2019ರ ಜನವರಿಯಲ್ಲಿ ಗೀತಾ ನೂತನ ಸಂವತ್ಸರದಲ್ಲಿ 'ಐಎಂಎಫ್'ನ ಮುಖ್ಯ ಆರ್ಥಿಕ ಸಲಹೆಗಾರರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅರಮನೆಗಳ ನಗರಿ ಮೈಸೂರಿನಲ್ಲಿ ಬೆಳೆದ ಯುವತಿ ಗೀತಾ ಈಗ ಜಾಗತಿಕ ಆರ್ಥಿಕ ಕ್ಷೇತ್ರದ ತಜ್ಞೆಯಾಗಿ ಹೆಸರು ಮಾಡುತ್ತಿದ್ದಾರೆ. ಅವರನ್ನು 2018ರ ಅಕ್ಟೋಬರ್‌ನಲ್ಲಿ ಐಎಂಎಫ್‌ನ ಮುಖ್ಯ ಆರ್ಥಿಕ ಸಲಹೆಗಾರರಾಗಿ ನೇಮಕ ಮಾಡಲಾಗಿತ್ತು.

ಹಾರ್ವರ್ಡ್ ವಿ.ವಿಯಲ್ಲಿ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದ ಅವರು ಕೆಲವು ದಿನಗಳ ಹಿಂದೆಯಷ್ಟೇ ವಾಷಿಂಗ್ಟನ್ ಡಿ.ಸಿ.ಗೆ ಸ್ಥಳಾಂತರವಾಗಿದ್ದು, ಸದ್ಯ ಅಮೆರಿಕದ ಪೌರತ್ವ ಹೊಂದಿದ್ದಾರೆ. 'ಅಮೆರಿಕನ್ ಎಕಾನಮಿಕ್ ರಿವ್ಯೂ' ಸಂಪಾದಕಿ ಕೂಡ. 2016ರಲ್ಲಿ ಅವರನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಆರ್ಥಿಕ ಸಲಹೆಗಾರರಾಗಿ ನೇಮಕ ಮಾಡಲಾಗಿತ್ತು.

ಮೈಸೂರಿನ ವಿ.ವಿ ಮೊಹಲ್ಲಾದಲ್ಲಿರುವ ನಿರ್ಮಲಾ ಕಾನ್ವೆಂಟ್‌ನಲ್ಲಿ ಗೀತಾ 4ರಿಂದ 10ನೇ ತರಗತಿವರೆಗೆ ಓದಿದರು. ಮಹಾಜನ ಪಿಯು ಕಾಲೇಜಿನಲ್ಲಿ ವಿಜ್ಞಾನ ವಿಷಯ ಓದಿದ್ದ ಅವರು ಬಳಿಕ ಆರ್ಥಿಕ ವಿಷಯದಲ್ಲಿ ಒಲವು ಬೆಳೆಸಿಕೊಂಡರು.

'ವೈದ್ಯಕೀಯ ಅಥವಾ ಎಂಜಿನಿಯರಿಂಗ್ ಸೇರಿಸುವ ಆಲೋಚನೆ ಇತ್ತು. ಮತ್ತೊಬ್ಬ ಮಗಳು ಎಂಜಿನಿಯರಿಂಗ್ ಮಾಡುತ್ತಿದ್ದಳು. ಹೀಗಾಗಿ, ಯುಪಿಎಸ್‌ಸಿ ಪರೀಕ್ಷೆ ಬರೆಯಲು ಸುಲಭವಾಗಲಿ ಎಂಬ ಉದ್ದೇಶದಿಂದ ನವದೆಹಲಿಯ ಲೇಡಿ ಶ್ರೀರಾಮ ಕಾಲೇಜಿಗೆ ಸೇರಿಸಿದೆ. ಅರ್ಥಶಾಸ್ತ್ರದಲ್ಲಿ ಬಿ.ಎ (ಆನರ್ಸ್) ಓದಿದಳು. ಅಗ್ರಸ್ಥಾನ ಪಡೆದ ಅವಳಿಗೆ ದೆಹಲಿ ಸ್ಕೂಲ್ ಆಫ್ ಎಕಾನಮಿಕ್ಸ್‌ನಲ್ಲಿ ಪ್ರವೇಶ ಸಿಕ್ಕಿತು. ಬಳಿಕ ಅಮೆರಿಕದ ವಾಶಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿ, ಪ್ರಿನ್ಸ್‌ಟನ್ ವಿ.ವಿಯಲ್ಲಿ ಪಿಎಚ್.ಡಿ ಪದವಿ ಪಡೆದಳು' ಎಂದು ಗೋಪಿನಾಥ್ ಹೇಳುತ್ತಾರೆ.

'ಐಎಂಎಫ್'ನ ಪ್ರತಿಷ್ಠಿತ ಹುದ್ದೆ ಅಲಂಕರಿಸಿರುವ ಭಾರತದ ಎರಡನೇ ವ್ಯಕ್ತಿ ಎನ್ನುವ ಹಿರಿಮೆ ಗೀತಾ ಅವರದು. ಇದಕ್ಕೂ ಮೊದಲು ಆರ್‌ಬಿಐ ಮಾಜಿ ಗವರ್ನರ್ ರಘುರಾಂ ರಾಜನ್ ಈ ಹುದ್ದೆಯಲ್ಲಿದ್ದರು.